ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಶುಕ್ರವಾರ, ದಿನಾಂಕ 19ನೇ ಜುಲೈ, 2019

ಬಿಡಿಎನಲ್ಲಿ ಅಗತ್ಯಕ್ಕಿಂತ ಹೆಚ್ಚು ಎರವಲು ಸೇವಾ ಅಧಿಕಾರಿ/ ನೌಕರರು ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ

ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :-

410 (436) ಮಾನ್ಯ ಉಪ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಎರವಲು ಸೇವೆಯ ಆಧಾರದ ಮೇಲೆ ಯಾವ ಯಾವ ಇಲಾಖೆಗಳ ಇಂಜಿನೀಯರ್ಗಳು ಮತ್ತು ಪೊಲೀಸ್ ಇಲಾಖೆಯ ಎಷ್ಟು ಜನರು ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಇವರು ಯಾವ ಯಾವ ಹುದ್ದೆಗಳಲ್ಲಿ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ;(ಹೆಸರು, ಹುದ್ದೆವಾರು ವಿವರ ನೀಡುವುದು)

(ಆ) ಸದರಿ ಅಧಿಕಾರಿ/ನೌಕರರಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಎರವಲು ಸೇವೆ ಆಧಾರದಲ್ಲಿ ಪ್ರಾಧಿಕಾರಕ್ಕೆ ನಿಯೋಜನೆಗೊಂಡವರು ಯಾರ್ಯಾರು; ಎಷ್ಟು ಬಾರಿ ನಿಯೋಜನೆಗೊಂಡಿರುತ್ತಾರೆ; (ಹೆಸರು, ನಿಯೋಜನೆಗೊಂಡ ದಿನಾಂಕ ಮತ್ತು ಬಿಡುಗಡೆಗೊಳಿಸಿರುವ ದಿನಾಂಕವಾರು ವಿವರ ನೀಡುವುದು)

(ಇ) ಪ್ರಾಧಿಕಾರದಲ್ಲಿ ಅವಶ್ಯಕತೆಗಿಂತ ಹೆಚ್ಚಿನ ಸಂಖ್ಯೆಯ ಅಧಿಕಾರಿ/ ನೌಕರರನ್ನು ನಿಯೋಜನೆ ಮೇಲೆ ತೆಗೆದುಕೊಂಡಿರುವುದು ನಿಜವೇ; ಆರಕ್ಷಕರಾಗಿ ಸಾಮಾಜಿಕ ಕೆಲಸದಲ್ಲಿ ಸೇವೆ ಮಾಡಬೇಕಾದ ಪೊಲೀಸರು ಅನಗತ್ಯವಾಗಿ ಪ್ರಾಧಿಕಾರದ ಎಕ್ಸಿಕ್ಯೂಟಿವ್ ಸಿಬ್ಬಂದಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ನಿಜವೇ ಇದನ್ನು ಸರಿಪಡಿಸಲು ಕೈಗೊಳ್ಳುವ ಕ್ರಮಗಳೇನು;

(ಈ) ಪ್ರಾಧಿಕಾರದಲ್ಲಿಯೇ ಅರ್ಹ ಅಧಿಕಾರಿ/ನೌಕರರು ಲಭ್ಯವಿದ್ದರೂ ಮತ್ತು ಅನುಕಂಪದಲ್ಲಿ ನೇಮಕ ಮಾಡಬೇಕಾದ ಅಭ್ಯರ್ಥಿಗಳನ್ನು ಕಡೆಗಣಿಸಿ ಅನಗತ್ಯವಾಗಿ ಎರವಲು ಸೇವೆಯ ಮೇಲೆ ಅಧಿಕಾರಿ/ ನೌಕರರನ್ನು ತೆಗೆದುಕೊಳ್ಳುತ್ತಿರುವುದಕ್ಕೆ ಕಾರಣಗಳೇನು ?